ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

**ಕೆ.ಆರ್.ನಗರ**

**ಸಿಸಿ 1575/2019**

**ಪಿಡಬ್ಲ್ಯೂ2**

**ದಿನಾಂಕ 12-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು ಶ್ರೀ. ಎಸ್ ಎಸ್ ಆರ್ ವಕೀಲರಿಂದ ಆರೋಪಿ ಪರ ವಕೀಲರುಃ

ಆರೋಪಿತರು ನಮ್ಮ ಹಳೆ ಸಂಬಂಧಿಕರು, ಬೀಗರು ಎಂದರೆ ಸರಿ. ಸುಮಾರು 4 ವರ್ಷದ ಹಿಂದೆ ನನ್ನ ಮಗಳು ಕಾಳುಮಾತ್ರೆ ತಿಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ನನ್ನ ಮಗಳು ಮೃತಪಟ್ಟ 4-5 ದಿನಗಳ ಬಳಿಕ ಹುಣಸೂರು ಪೋಲಿಸ್ ಠಾಣೆಗೆ ದೂರು ಕೊಟ್ಟಿರುತ್ತೇವೆ ಎಂದರೆ ಸರಿ. ದಿಃ 06.04.2018 ರಂದು ಆರೋಪಿತರು ತೊಂಡಾಳು ಗ್ರಾಮದಲ್ಲೇ ಇದ್ದರು ಕೆ ಆರ್ ನಗರಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ.

2. ಗಲಾಟೆಯಾದ ದಿನಾಂಕ 06.04.2018 ಆಗಿರುತ್ತದೆ ಎಂದರೆ ಸರಿ. ಆ ದಿನ ಆರೋಪಿತರಿಬ್ಬರೂ ನನಗೆ ಚಾಕುವಿನಿಂದ ಹೊಡೆದರು. ಆ ದಿನ ಆರೋಲಪಿತರು ನಮಗೆ ಹಲ್ಲೇ ಮಾಡಿಲ್ಲ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಆ ದಿನ ಆಸ್ಪತ್ರೆಗೆ ದಾಖಲಾಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಣ್ಣ ಗಾಯವಾಗಿದ್ದರಿಂದ ಆಸ್ಪತ್ರೆಗೆ ಹೋಗಿಲ್ಲ ಕೊಲೆ ಬೆದರಿಕೆ ಹಾಕಿದ್ದರು ಅದಕ್ಕೆ ಪೋಲಿಸ್ ಠಾಣೆಗೆ ಹೋಗಿದ್ದೇವು. ಚಾಸಾ 3 ಮತ್ತು 4 ಆ ದಿನ ಮನೆಯ ಬಳಿ ಇರಲಿಲ್ಲ ಎಂದರೆ ಅವರು ಹೊರಗೆ ಹೋಗಿದ್ದರು ನಂತರ ಬಂದರು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಪೋಲಿಸರಿಗೆ ಮನೆಯ ಬಳಿ ಹೇಳಿಕೆ ನೀಡಿದ್ದೇನೆ. ನಾನು ಚಾಸಾ 1 ಮತ್ತು 3 ರವರ ಮಾತನ್ನು ಕೇಳಿ ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ . ಆರೋಪಿತರಿಂದ ನಾವು ಹಣಕ್ಕೆ ಡಿಮಾಂಡ್ ಮಾಡಿದ್ದೇವು ಅವರು ನೀಡಿದ ಕಾರಣ 2 ದಿನಗಳ ಬಳಿಕ ಅವರ ವಿರುದ್ದದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿದ್ದು ಮುಂದಿನ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ